# ಫುಸ್ಕೋಸ್ ಶಾಲೆ

ಇಂದಿರಾನಗರ ಬೆಂಗಳೂರು

ಅರ್ಧವಾರ್ಷಿಕ ಪರೀಕ್ಷೆ – 2016-17

ವಿಷಯ; ಕನ್ನಡ

ತರಗತಿ:IX ಅಂಕಗಳು:80

---

ವಿಭಾಗ ಎ

**I. ಪ್ರಬಂಧ (ಬೇಕಾದ ಒಂದಕ್ಕೆ ಮಾತ್ರ)** **15**

೧. ಕಂಪ್ಯೂಟರನ ಉಪಯೋಗ ಮತ್ತು ದುರುಪಯೋಗ

೨. ಶಾಲಾ ಪ್ರವಾಸ ವಿದ್ಯಾರ್ಥಿ ಜೀವನದಲ್ಲಿ, ನೀವು ಯಾವ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಿರಿ ಎಂಬುವುದರ ಕುರಿತು ಒಂದು ಪ್ರಬಂಧ ಬರೆಯಿರಿ.

**II. ಪತ್ರಲೇಖನ (ಬೇಕಾದ ಒಂದಕ್ಕೆ ಮಾತ್ರ)** **7**

೧. ನಿಮಗೆ ಕನ್ನಡ ಪುಸ್ತಕ ಬೇಕೆಂದು ಪುಸ್ತಕಭಂಡಾರಕ್ಕೆ ಒಂದು ಪತ್ರವನ್ನು ಬರೆಯಿರಿ:–

೨. ನೀವು ರಜಾದಲ್ಲಿ ಕಳೆದ ದಿವಸಗಳ ಕುರಿತು ನಿಮ್ಮ ಗೆಳೆಯನಿಗೆ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ:–

**III. ಗ್ರಹಣ ಶಕ್ತಿ**

ಫ್ಲಾರೆನ್ಸ್ ನೈಟಿಂಗೇಲ್ ಒಬ್ಬ ಅಸಾಧಾರಣ ಮಹಿಳೆ. ಇವಳು ಕೇವಲ ದಾದಿಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಲಿಲ್ಲ. ಆಡಳಿತ ಸೂತ್ರವನ್ನು ಹಿಡಿದ ಅಧಿಕಾರಿಯೂ ಆದಳು. ತೀರ ದುಃಸ್ಥಿತಿಯಲ್ಲಿದ್ದ ಈ ಮಿಲಿಟರಿ ಆಸ್ಪತ್ರೆಗಳಲ್ಲಿ ಕೇವಲ ದಾದಿಯಾಗಿ ರೋಗಿಗಳ ಆರೈಕೆ ಮಾಡುವುದು ಸಾಂತ್ವಾನ ನೀಡುವುದು ಮಾತ್ರ ತನ್ನ ಕೆಲಸ ಎಂದು ಫ್ಲಾರೇನ್ಸ್‌ಳು ಅಂದುಕೊಳ್ಳಲಿಲ್ಲ. ಆಸ್ಪತ್ರೆಯ ಸ್ಥಿತಿಯನ್ನು ಉತ್ತಮ ಪಡಿಸುವುದು ತನ್ನ ಪರಮ ಕರ್ತವ್ಯ ಎಂದು ಭಾವಿಸಿದಳು.

ಫ್ಲಾರೆನ್ಸ್ ನೈಟಿಂಗೇಲ್ ಈ ರೀತಿ ದಿನದಲ್ಲಿ ೨೦ ಗಂಟೆಗಳು ಬಿಡುವಿಲ್ಲದೆ ಕೆಲಸ ಮಾಡಿದಳು. ರೋಗಿಗಳ ಮಧ್ಯೆ ಅವಿರತವಾಗಿ ಕೆಲಸ ಮಾಡುತ್ತಾ, ಹಾಸಿಗೆಯಿಂದ ಹಾಸಿಗೆಗೆ ಹಗಲೂ ಇರುಳೆನ್ನದೆ ಸುತ್ತಾಡುತ್ತಿದ್ದಳು, ರೋಗಿಗಳ ಅಸಾಧ್ಯವಾದ ಧೈರ್ಯದಿಂದ ಅತಿ ಎಚ್ಚರಿಕೆಯಿಂದ, ಅಸದೃಶವಾದ ಶ್ರದ್ದೆಯಿಂದ ಈ ಕೆಲಸಕ್ಕೆ ತನ್ನನ್ನು ಅರ್ಪಿಸಿಕೊಂಡಳು.

ಅಷ್ಟು ದೂಡ್ಡ ಆಸ್ಪತ್ರೆಯಲ್ಲಿ ಯಾವ ರೋಗಿ ಚಿಂತಾಜನಕ ಸ್ಥಿತಿಯಲ್ಲಿರುತ್ತಿದ್ದನೋ,ಯಾರಿಗೆ ವೈದ್ಯಕೀಯ ನೆರವು ಅತ್ಯವಶ್ಯಕವಾಗಿರುತ್ತಿತೋ ಅಲ್ಲಿ ನೈಟಿಂಗೇಲ್‌ಳ ಸಹಾಯ ಹಸ್ತವು ಇದ್ದೇ ಇರುತ್ತಿತ್ತು. ಅವಳೂ ಇದ್ದಾಳೆ ಎನ್ನುವ ಅರಿವೇ ರೋಗಿಗಳಲ್ಲಿ ಆಸೆಯ ಕಿರಣವನ್ನು ಹುಟ್ಟಿಸುತ್ತಿತ್ತು. ಬದುಕುವ ಆಸೆ ಉಂಟಾಗುತ್ತಿತ್ತು. ಜೀವನ್ನಕ್ಕೆ ಮರಳುವ ಉತ್ಸಾಹ ಪುಟಿಯುತ್ತಿತ್ತು.

ಅವಳ ಒಂದು ದಿನವೂ ಎತ್ತರದ ದನಿಯಲ್ಲಿ ಮಾತನಾಡಿದುದನ್ನು ನಾನು ಕೇಳಲಿಲ್ಲ ಎಂದು ಫ್ಲಾರೆನ್ಸ್‌ಳ ಜೂತೆ ಕೆಲಸ ಮಾಡುತ್ತಿದ್ದ ದಾದಿಯರು ಹೇಳುತ್ತಿದ್ದರು. ಮೃದುವಾಗಿ ಮಾತನಾಡಿದರೂ ಅವಳ ಮಾತನ್ನು ತೆಗೆದು ಹಾಕಲು ಸಾಧ್ಯವಿರಲಿಲ್ಲ. ಅವಳ ಮಾತನ್ನು ಪಾಲಿಸಲೇಬೇಕು ಎನ್ನುವಂತಹ ದೃಢತೆ ಅವಳ ಮಾತಿನಲ್ಲಿರುತ್ತಿತ್ತು. ಕಟ್ಟು ನಿಟ್ಟಾದ

ಶಿಸ್ತಿನ ಕ್ರಮದಿಂದ, ಪ್ರತಿಯೊಂದು ಸಣ್ಣ ವಿವರಕ್ಕೂ ಗಮನ ಕೂಡುವುದರ ಮೂಲಕ, ಅವಿಶ್ರಾಂತ ದುಡಿಮೆಯಿಂದ ಗೆದ್ದೇ ಗೆಲ್ಲುವೆನೆಂಬ ದೃಢವಿಶ್ವಾಸದಿಂದ ಆಸ್ಪತ್ರೆಗೆ ನೈಟಿಂಗೇಲಳು ಒಂದು ಹೊಸ ರೂಪ ಕೊಟ್ಟಳು ಎನ್ನುವುದಂತೂ ಸತ್ಯ.

**ಪ್ರಶ್ನೆಗಳು** **10**

೧. ಫ್ಲಾರೆನ್ಸ್ ನೈಟಿಂಗೇಲ್ ಯಾರು? ಪರಿಚಯಿಸಿ.
೨. ಫ್ಲಾರೆನ್ಸ್ ನೈಟಿಂಗೇಲ್ ಹೇಗೆ ಕೆಲಸ ನಿರ್ವಹಿಸುತ್ತಿದ್ದಳು?
೩. ಫ್ಲಾರೆನ್ಸ್ ಬಗ್ಗೆ ರೋಗಿಗಳ ಅಭಿಪ್ರಾಯ ಏನಾಗಿತ್ತು?
೪. ಫ್ಲಾರೆನ್ಸ್ ಬಗ್ಗೆ ಅವಳ ಜೂತೆ ಕೆಲಸ ಮಾಡುತ್ತಿದ್ದ ಇತರ ದಾದಿಯರ ಅಭಿಪ್ರಾಯ ಏನಾಗಿತ್ತು?
೫. ಮೇಲಿನ ಗದ್ಯಭಾಗವನ್ನು ಓದಿದಾಗ ಫ್ಲಾರೆನ್ಸ್ ನೈಟಿಂಗೇಲ್ ಬಗ್ಗೆ ನಿಮ್ಮ ಅಭಿಪ್ರಾಯವೇನು?

## IV. ವ್ಯಾಕರಣ. **8**

೧. ಗಗನ, ಆನಂದ (ಸಮನಾರ್ಥಕ ಪದ ಬರೆಯಿರಿ)
೨. ನೋವು,ಯುವಕ(ವಿರುದ್ಧಾರ್ಥಕ ಪದ ಬರೆಯಿರಿ)
೩. ಪೋಷಿಸು,ಇಚ್ಛೆ(ಸ್ವಂತ ವಾಕ್ಯದಲ್ಲಿ ಬರೆಯಿರಿ)
೪. ಕೈ ಕೆಸರಾದರೆ ಬಾಯಿ ---- (ಗಾದೆ ಮಾತನ್ನು ಪೂರ್ತಿಗೊಳಿಸಿರಿ)
೫. ಮರವು ಮಳೆಗಾಳಿಗೆ ಮುರಿದು ಬಿತ್ತು (ಬಹುವಚನಕ್ಕೆ ಬದಲಾಯಿಸಿರಿ)
೬. ವಾಹನಗಳು ಬೆಟ್ಟ ಪ್ರದೇಶಗಳಲ್ಲಿ ನಿಧಾನವಾಗಿ ಚಲಿಸುವವು.(ಭೂತಕಾಲಕ್ಕೆ ಬದಲಾಯಿಸಿರಿ)
೭. ಮುದುಕ ಕೋಲು ಹಿಡಿದು ನಡೆಯುತ್ತಾನೆ (ಲಿಂಗ ಬದಲಾಯಿಸಿರಿ)
೮. ಶಾಲೆ______ ಸಮಯ______ ಸರಿಯಾಗಿ ಹೋಗಬೇಕು(ಬಿಟ್ಟ ಸ್ಥಳಗಳಲ್ಲಿ ಸೂಕ್ತ ಪ್ರತ್ಯಯಗಳನ್ನು ತುಂಬಿರಿ)

### ವಿಭಾಗ - ಬಿ
### (ಬೇಕಾದ ನಾಲ್ಕಕ್ಕೆ ಮಾತ್ರ )
### ಸಾಹಿತ್ಯ ಸಂಗಮ

## V. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ತುಚೀಪ್, ತುದಾಂಡ್, ತುಬದ್- ರೆಡೀ)

೧. ಚದುರಂಗ ಎಂಬುದು ಯಾರ ಕಾವ್ಯನಾಮ ? ಅವರ ಜನ್ಮಸ್ಥಳ ಯಾವುದು ? ಅವರ ತಂದೆ-ತಾಯಿಯ ಹೆಸರೇನು ? 2
೨. ಸಿರಿವಂತಿಕೆಯಲ್ಲಿ ಬೆಳೆದ ಜನಾರ್ಧನ ಕರೀಮನಿಗೆ ಹೇಳಿದ್ದೇನು ? 2
೩. ಕರೀಮನು ವೇಗವಾಗಿ ಎಲ್ಲಿಗೆ ಹೋಗುತ್ತಿದ್ದನು ? ಅವನಿಗೆ ನಗು ಬರಲು ಕಾರಣವೇನು ? 3
೪. ತಿಮ್ಮಾರೆಡ್ಡಿಗೆ ಅವಮಾನವಾಗಿ ಕೋಪ ಉಂಟಾಗಲು ಕಾರಣವೇನು ? 3

**VI. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಗರುಡಗಂಬದ ದಾಸಯ್ಯ)**

೧. ಲೇಖಕರಿಗೆ ಗರುಡಗಂಬವು ಹೇಗೆ ಸಿಕ್ಕಿತು ? 2

೨. ಲೇಖಕರಿಗೆ ಅವಮಾನವುಂಟಾಗಲು ಕಾರಣವೇನು ? 2

೩. ಲೇಖಕರು ತಮ್ಮ ಗರುಡಗಂಬವನ್ನು ಹಿಡಿದ ಸ್ನೇಹಿತನ ಕೊಠಡಿಗೆ ಏಕೆ ಹೋದರು ? 3

೪. ಲೇಖಕರು ಸ್ಟೇಷನ್‌ನಿಂದ ಓಡಿಹೋಗಲು ಕಾರಣವೇನು ? 3

**ನಾಟ್ಯಮಯೂರಿ**

**VII. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಅಧ್ಯಾಯ– ೪)**

೧. ಡಣಾಯಕ ಮಾರಸಿಂಗಮಯ್ಯನವರಿಗೆ ರಾಜಮಾತೆ ಏಚಲಾದೇವಿಯವರು ಕಳುಹಿಸಿದ ಓಲೆಯಲ್ಲಿದ್ದ ಸಂಗತಿಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ. 2

೨. ಮಾರಸಿಂಗಮಯ್ಯನವರು ತಮ್ಮ ಹೆಂಡತಿಗೆ ತಿಳಿಸಿದ ಜೇನಿನಂತ ಸುದ್ದಿ ಯಾವುದು ? 2

೩. ರಾಜಧಾನಿಯಿಂದ ಶಾಂತಲೆಗೆ ಬಂದ ಉಡುಗೊರೆ ಏನು ? ವಿವರಿಸಿರಿ. 3

೪. ಶಾಂತಲೆ ಕಳುಹಿಸಿದ ಚಿತ್ರ ವಿನ್ಯಾಸಕ್ಕೆ ದೊರೆತ ಪ್ರತಿಕ್ರಿಯೆಗಳೇನು ? 3

**VIII. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಅಧ್ಯಾಯ– ೫)**

೧. ರಾಜವಾಡೆಯಲ್ಲಿ ನಡೆದ ಸಂಗೀತಗೋಷ್ಠಿಯನ್ನು ವರ್ಣಿಸಿ. 2

೨. ಶಾಂತಲೆಯು ಅರಮನೆಯ ರೀತಿ, ನೀತಿಗಳಿಗೆ ಹೇಗೆ ಹೊಂದಿಕೊಂಡಳು ? 2

೩. ವಿಷ್ಣುವರ್ಧನನಿಗೆ ಎದುರಾದ ಸಂದಿಗ್ಧ ಪರಿಸ್ಥಿತಿಯ ಬಗ್ಗೆ ರಾಜಮಾತೆ ಹೇಳಿದ್ದೇನು ? 3

೪. ಹೊಯ್ಸಳ ಸಾಮ್ರಾಜ್ಯದ ಮುಖ್ಯಮಂತ್ರಿಯಾಗಲು ಯಾರ್‍ಯಾರು ಅರ್ಹರಾಗಿದ್ದರು ? ಶಾಂತಲೆ ಯಾರನ್ನು ಆಯ್ಕೆ ಮಾಡಿದಳು ? ಕಾರಣವೇನು ? 3

**IX. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ಅಧ್ಯಾಯ – ೮)**

೧. ಹೊಯ್ಸಳೇಶ್ವರ ವಿಷ್ಣುವರ್ಧನ ಯುದ್ಧಕ್ಕೆ ಏಕೆ ಸಿದ್ಧನಾಗಬೇಕಾಯಿತು ? 2

೨. ವಿಸ್ಣುವರ್ಧನನಿಗೆ 'ತಲಕಾಡುಗೊಂಡ' ಎಂಬ ಹೆಸರು ಹೇಗೆ ಬಂದಿತು ? 2

೩. ಬನದಮ್ಮನ ಹಳ್ಳಿಯಲ್ಲಿ ಪಂಚಾಯತಿ ಏಕೆ ಸೇರಿತ್ತು ? ವಿವರಿಸಿ. 3

೪. ಬೀರಣ್ಣ ಮತ್ತು ಈರಣ್ಣನ ಔದಾರ್ಯ ಕಾದಂಬರಿಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ. 3

**********